# ವೈವಾಹಿಕ ಬದುಕಿನಲ್ಲಿ ಉತ್ತುಂಗ ಶಿಖರಕ್ಕೇರಿದ ಆದರ್ಶ ದಂಪತಿಗಳು

● ಎಂ. ಅನಸೂಯ

ಶ್ರೀಶಾರದಾದೇವಿ ಮತ್ತು ಶ್ರೀರಾಮಕೃಷ್ಣರದು ಆದರ್ಶ ವೈವಾಹಿಕ ಜೀವನ. ಶ್ರೀರಾಮಕೃಷ್ಣರು ವೈರಾಗ್ಯದ ತೀವ್ರ ಸಾಧನೆಯಲ್ಲಿ ತೊಡಗಿದ್ದು ದೈವಾನಂದದ ಅನುಭವದಲ್ಲಿ ಸದಾ ಮುಳುಗಿದ್ದರೂ ಸತಿಗಾಗಿ ತಮ್ಮ ಕರ್ತವ್ಯ ಪ್ರಜ್ಞೆಯನ್ನು ಎಂದಿಗೂ ಮರೆತವರಲ್ಲ. ಪತ್ನಿಯ ಮನಸ್ಸನ್ನು ಅರಿತವರಾಗಿದ್ದು ಅವರನ್ನು ನಿಜದ ಬದುಕಿನೆಡೆಗೆ ಕರೆದೊಯ್ಯಲು ಗುರುವಾಗಿ ಮುನ್ನಡೆಸಿದವರು. ಮಡದಿ ಅವರಿಗೆ ಮಾಯಾಸ್ವರೂಪಿಣಿಯಾದ ಸ್ತ್ರೀಯಾಗಿರಲಿಲ್ಲ; ದೇವತೆಯಾಗಿದ್ದರು. ಸಹಧರ್ಮಿಣಿಯ ಸಹಜ ಭಾವನೆಗಳಿಗೂ ಇಚ್ಛೆಗಳಿಗೂ ಸ್ಪಂದಿಸುವ ಮನೋಗುಣ, ಕರ್ತವ್ಯ ಅವರಿಗೆ ಖಂಡಿತ ಇತ್ತು ಎನ್ನುವುದನ್ನು ಒಂದು ಸಂಭಾಷಣೆಯಿಂದ ಗಮನಿಸಬಹುದು. ಒಮ್ಮೆ ಪತ್ನಿಯನ್ನು ಕುರಿತು "ನೀನು ನನ್ನ ಪತ್ನಿ. ನನ್ನ ಮೇಲೆ ನಿನಗೆ ಅಧಿಕಾರವಿದೆ. ನಿನಗೆ ಸಂಸಾರದ ಜೀವನದಲ್ಲಿ ಆಸಕ್ತಿಯಿದ್ದರೆ, ವಿವಾಹಧರ್ಮಕ್ಕೆ ಅನುಗುಣವಾಗಿ ನಿನ್ನಿಚ್ಛೆಯನ್ನು ನೆರವೇರಿಸಲು ನಾನು ಸಿದ್ಧನಿದ್ದೇನೆ" ಎನ್ನುತ್ತಾರೆ ಶ್ರೀರಾಮಕೃಷ್ಣರು.

ಆದರೆ ಶಾರದಾದೇವಿಯವರ ಇಚ್ಛೆ ಪತಿಯ ಸೇವೆ ಹಾಗೂ ಅವರೊಂದಿಗೆ ಸಾಧನೆಯಲ್ಲಿ ಯಶಸ್ಸನ್ನು ಪಡೆಯುವುದಾಗಿತ್ತು. ಅವರು ಇಚ್ಛಿಸಿದ್ದರೆ ಶ್ರೀರಾಮಕೃಷ್ಣರನ್ನು ವಿಷಯಾಸಕ್ತ ಬಂಧನದಲ್ಲಿ ಸಿಲುಕಿಸಬಹುದಿತ್ತು. ಅವರಿಗೆ ಅಂತಹ ನೈತಿಕ ಹಕ್ಕಿತ್ತು. ಆದರೆ ಸಂಯಮತೆಗೆ ಮತ್ತೊಂದು ಹೆಸರಾದ ಶಾರದಾದೇವಿಯವರು ತಮ್ಮ ಪತಿಗೆ ಪ್ರತ್ಯುತ್ತರ ಕೊಡುತ್ತಾ "ನಾನು ನಿಮ್ಮ ಸಹಧರ್ಮಿಣಿ. ನಿಮ್ಮ ಧರ್ಮಜೀವನಕ್ಕೆ ಸಹಾಯಕವಾಗಿರುವುದೇ ನನ್ನ ಕರ್ತವ್ಯ. ನಿಮ್ಮ ಮಹಾ ಆದರ್ಶದ ಗುರಿಯೇ ನನ್ನ ಆದರ್ಶದ ಗುರಿಯೂ ಕೂಡ. ನಿಮ್ಮನ್ನು ಮಾಯೆ ಅಥವಾ ಮೋಹದೆಡೆಗೆ ಎಳೆಯುವುದು ನನ್ನ ಇಚ್ಛೆಯಲ್ಲ" ಎಂದು ತಮ್ಮ ದೃಢ ನಿಲುವನ್ನು ಸ್ಪಷ್ಟಪಡಿಸುತ್ತಾರೆ.

ಶ್ರೀರಾಮಕೃಷ್ಣರು ಸಹಧರ್ಮಿಣಿಯ ಜೊತೆ ಪ್ರೀತಿಯಿಂದ, ಸಲಿಗೆಯಿಂದ ನಡೆದುಕೊಂಡರೂ ಅವರ ಮನಸ್ಸು ಪುಟವಿಟ್ಟ ಚಿನ್ನದಂತೆ ಕಿಂಚಿತ್ತೂ ವ್ಯಾಮೋಹಕ್ಕೆ ಸಿಲುಕದೆ ದಿನೇ ದಿನೇ ಹೊಳೆಯಲಾರಂಭಿಸಿತು. ಶ್ರೀರಾಮಕೃಷ್ಣರ ಈ ರೀತಿಯ ಅನುಭವವು ಅವರ ಪತ್ನಿಯ ಜೀವನದಲ್ಲೂ ಬಹಳ ಪರಿಣಾಮವನ್ನುಂಟುಮಾಡಿತು. ಪತಿಯದು ಕಾಮರಹಿತವಾದ ಪ್ರೀತಿ, ಆ ಪ್ರೀತಿಯಲ್ಲಿ ಸ್ವಲ್ಪವೂ ಸ್ವಾರ್ಥತೆಯ ಛಾಯೆ ಕೂಡ ಇರಲಿಲ್ಲ. ಶ್ರೀರಾಮಕೃಷ್ಣರು ಮೇಲುನೋಟಕ್ಕೆ ಸಾಮಾನ್ಯ ವ್ಯಕ್ತಿಯಂತೆ ತೋರಿದರೂ ಅವರ ಅಂತರ್ಯದಲ್ಲಿ ಅಲೌಕಿಕ ತೇಜಸ್ಸು ಇತ್ತು. ಅವರ ನುಡಿಗೂ ನಡೆಗೂ ಭಿನ್ನತೆಯಿರಲಿಲ್ಲ. "ನಾನು ಅವರ ಸಮೀಪದಲ್ಲಿದ್ದಾಗ ಯಾವುದೋ ಇಂದ್ರಿಯಾತೀತವಾದ ಆನಂದದಲ್ಲಿ ತಲ್ಲೀನಳಾಗುತ್ತಿದ್ದೆ" ಎನ್ನುತ್ತಾರೆ ಶಾರದಾದೇವಿಯವರು.

ಪತಿಯ ಸಾಧನೆಗಳ ಬಗ್ಗೆ ಭಕ್ತಿ-ಗೌರವವನ್ನು ಹೊಂದಿದ್ದು ತಮ್ಮ ಬದುಕಿಗೆ ಅವರನ್ನು ಗುರುವಾಗಿ ಸ್ವೀಕರಿಸಿ, ತಮ್ಮ ಸಾಧನೆಗೂ ಅವರಿಂದ ಉತ್ತೇಜನ ಹಾಗೂ ಮಾರ್ಗದರ್ಶನ ಪಡೆದು ಉತ್ತುಂಗ ಶಿಖರವನ್ನು ಏರಲು ಅನುವಾದರು. ಉದಾತ್ತ ಗುಣಗಳ ಗಣಿಯಾಗಿದ್ದ ಶ್ರೀಶಾರದಾದೇವಿಯವರು ಪತಿಗೆ ತಕ್ಕ ಸತಿಯಾಗಿ ಶ್ರೀರಾಮಕೃಷ್ಣರ ಆಧ್ಯಾತ್ಮಿಕತೆಗೆ ಅನುಗುಣವಾಗಿದ್ದರು. ಇವರಿಬ್ಬರ ಆಸೆ-ಆಕಾಂಕ್ಷೆಗಳು, ಜೀವನದ ಧ್ಯೇಯೋದ್ದೇಶಗಳು ಒಂದೇ ರೀತಿಯಿದ್ದು ಅಪರೂಪದ ದಾಂಪತ್ಯವಾಗಿ ಪರಿಣಮಿಸಿ ತಮ್ಮ ಗುರಿ-ಸಾಧನೆಯಲ್ಲಿ ಒಬ್ಬರಿಗೊಬ್ಬರು ಪೂರಕವಾಗುತ್ತಾ ನಡೆದರು.

ಇವರಿಬ್ಬರಲ್ಲಿದ್ದ ದಿವ್ಯತೆಯ ಬೆಳಕು ಅಸಾಧಾರಣವಾದುದು. ಹಾಗಾಗಿ ಪರಸ್ಪರ ಏರು-ಪೇರು ಭಾವನೆಗಳು, ಮೇಲು-ಕೀಳು ಕಲ್ಪನೆಗಳ ಕಿಂಚಿತ್ ಸ್ಪರ್ಶವೂ ಸಹ ಇಲ್ಲದೆ, ಸತಿಗೆ ಪತಿ ಅಧಿಕಾರಿಯಾಗಿ ತನ್ನ ಅಧಿಕಾರವನ್ನು ಚಲಾಯಿಸದೆ, ಪತಿಗೆ ಸತಿಯೂ ಅಧೀನಳಂತೆ ಭಾವಿಸದೆ, ವೈಯಕ್ತಿಕ ಅಭಿರುಚಿಗಳಿಗೆ ವಿರೋಧವಾಗದೆ ತಮ್ಮ ಬದುಕನ್ನು ದೈವಿಕ ಬಾಂಧವ್ಯವನ್ನಾಗಿ ರೂಪಿಸಿಕೊಂಡವರು. ಧಾರ್ಮಿಕ, ಸಾಮಾಜಿಕ, ಆಧ್ಯಾತ್ಮಿಕ ಹಾಗೂ ಹಲವು ಪ್ರಾಪಂಚಿಕ ಹೊಣೆಗಾರಿಕೆಗಳನ್ನು ಹೊತ್ತ ಈ ಮಹಾನ್ ಸತಿ-ಪತಿಗಳು, ಸತ್ಯನಿಷ್ಠೆ ಮತ್ತು ಸಾತ್ವಿಕ ಮನೋಭಾವದ ಅನ್ಯೋನ್ಯತೆಯನ್ನು ಒಳಗೊಂಡ ಆರೋಗ್ಯಕರ ಸಮಾಜ ನಿರ್ಮಾಣದತ್ತ ದಾಪುಗಾಲು ಹಾಕುತ್ತಾ ಸಾಗಿದರು. ಅವರಿಬ್ಬರು ಬಾಹ್ಯ ಪ್ರಪಂಚದಲ್ಲಿ ಬೇರೆ ಬೇರೆಯಾಗಿ ಗೋಚರಿಸಿದರೂ ಪರಸ್ಪರ ಭಗವದ್‌ಭಾವವು ಅವರಲ್ಲಿ ಆಳವಾಗಿ ಬೇರೂರಿತ್ತು. ಅವರಿಬ್ಬರಲ್ಲಿ ಇದ್ದಂತಹ ಭಕ್ತಿಯು ಶರಣ ದೇವರ ದಾಸಿಮಯ್ಯನು ತಿಳಿಸಿದಂತೆ, "ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ, ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷ ಬೆರೆದಂತೆ ಕಾಣಾ ರಾಮನಾಥ." ದೇವರಿಗೆ ಪ್ರಿಯವಾಗುವುದು ಸತಿಪತಿಗಳೊಡಗೂಡಿದ ಭಕ್ತಿ. ಶ್ರೀರಾಮಕೃಷ್ಣರು ಸತಿಯಲ್ಲೂ ದೈವವನ್ನು ಕಂಡಂತಹ ಮಹಾನುಭಾವರು. ಪರಸ್ಪರ ಭಕ್ತಿಯ ಸಾಮರಸ್ಯವನ್ನು ಹೊಂದಿದ್ದು ವ್ಯಕ್ತಿತ್ವದ ಮೇರು ಶಿಖರವಾಗಿ ತಮ್ಮ ಬದುಕನ್ನು ದಿವ್ಯ ಬಾಂಧವ್ಯವನ್ನಾಗಿ ರೂಪಿಸಿಕೊಂಡು, ಈ ದಂಪತಿಗಳು ಪರಸ್ಪರ ಅನುಮತಿಯಿಂದ ಆಜೀವಪರ್ಯಂತ ಬ್ರಹ್ಮಚರ್ಯ ವ್ರತವನ್ನು ಕೈಗೊಂಡವರು. ದೇಹದ ಭಾವನೆಯೇ ಇಲ್ಲದ ಇವರ ಈ



ಲೇಖಕಿ ಎಂ. ಅನಸೂಯ, ಅವರು ಮೈಸೂರಿನ ಮಾನಸ ಗಂಗೋತ್ರಿಯ ತತ್ತ್ವಶಾಸ್ತ್ರ ವಿಭಾಗದಲ್ಲಿ ಸಂಶೋಧಕಿಯಾಗಿದ್ದಾರೆ.

> ಅತ್ಯಮೂಲ್ಯವಾದ ಮಾನವ ಜನ್ಮವನ್ನು ಪಡೆದು ಪ್ರಾಣಿಗಳಂತೆ ಮಕ್ಕಳನ್ನು ಹಡೆದು ಜೀವಿಸುವದರಿಂದ ಏನು ಪ್ರಯೋಜನ? ಭಗವಂತನನ್ನು ತಿಳಿಯುವುದರ ಮೂಲಕ ಸ್ಥಿರವಾದ, ನಿಜವಾದ ಆನಂದ ದೊರೆಯುವದು. ಈ ಪ್ರಾಪಂಚಿಕ ಸುಖಗಳೆಲ್ಲ ಅದರ ಮುಂದೆ ತುಚ್ಛವಾಗಿ ಕಾಣುವುವು. —ಶ್ರೀರಾಮಕೃಷ್ಣ

ದಾಂಪತ್ಯವನ್ನು ಶುದ್ಧವಾದ ಮನಸ್ಸು ಮತ್ತು ಸ್ವಾರ್ಥರಹಿತ ಪ್ರೀತಿಯುಳ್ಳವರು ಮಾತ್ರ ತಿಳಿಯಬಲ್ಲರು.

ಶ್ರೀರಾಮಕೃಷ್ಣರು ಶ್ರೀಶಾರದಾದೇವಿಯವರಿಗೆ ಪತಿ ಮಾತ್ರ ಆಗಿರಲಿಲ್ಲ, ಪ್ರೀತಿಯ ಆರಾಧ್ಯ ದೇವರು ಕೂಡ ಆಗಿದ್ದರು. ಪ್ರಪಂಚ ಎಂದರೆ ಏನು ಎಂಬುದರ ಬಗ್ಗೆ ಸತಿಯ ಮುಂದೆ ಸ್ಪಷ್ಟ ಚಿತ್ರಣವನ್ನು ಬಿಚ್ಚಿಟ್ಟ ಈ ಆದರ್ಶ ಪತಿ ಅದರ ಒಟ್ಟಾರೆ ಸಾರಾಂಶವನ್ನು ಮನಮುಟ್ಟುವಂತೆ ತಿಳಿಸಿದರು. ಒಂದು ದೇಹದ ಎರಡು ಕಣ್ಣುಗಳಿದ್ದ ಹಾಗೆ ಈ ದಂಪತಿಗಳ ಆತ್ಮ ಒಂದೇ ಆಗಿತ್ತು. ಅದರಲ್ಲೂ ಶ್ರೀಶಾರದಾದೇವಿಯವರು ಅಧ್ಯಾತ್ಮದಂತಹ ಗಹನವಾದ ವಿಚಾರವನ್ನು ತಮ್ಮ ದೈನಂದಿನ ಬದುಕಿನಲ್ಲಿ ಸರ್ವೇ ಸಾಮಾನ್ಯ ಎಂಬುವಷ್ಟರ ಮಟ್ಟಿಗೆ ಅನುಷ್ಠಾನ ಗೈಯುತ್ತ ನೊಂದ ಜನರಿಗೆ ಅಕ್ಷಯಚೇತನವಾಗಿದ್ದರು.

ಕ್ಷಣಿಕ ಸುಖವನ್ನು ನೀಡುವ, ಒಂದಾದ ಮೇಲೆ ಮತ್ತೊಂದು ಪ್ರಾಪಂಚಿಕ ವಸ್ತುವನ್ನು ಬಯಸುತ್ತಾ ಅದರ ವ್ಯಾಮೋಹಕ್ಕೆ ಬಲಿಯಾಗಿ, ಐಷಾರಾಮದ ಬದುಕಿಗಾಗಿ ಹೋರಾಡಿ, ಅಶಾಂತಿಗೆ ಗುರಿಯಾಗಿ, ಮತ್ತೆ ಮತ್ತೆ ಅವುಗಳ ಬೆನ್ನಟ್ಟುವ ಪ್ರವೃತ್ತಿಗೆ ವಿರುದ್ಧವಾಗಿ, ಅವುಗಳ ವ್ಯಾಮೋಹಕ್ಕೆ ಒಳಗಾಗದೆ ಅದರಿಂದ ಸಂಪೂರ್ಣವಾಗಿ ಬಿಡುಗಡೆಯನ್ನು ಹೊಂದಿ, ದೈವಸಾಕ್ಷಾತ್ಕಾರವನ್ನು ಪಡೆಯುವುದೇ ಮಾನವನ ಮಹತ್ವದ ಗುರಿ ಎಂಬುದಕ್ಕೆ ಉಜ್ವಲ ನಿದರ್ಶನವಾಗಿತ್ತು ಈ ಆದರ್ಶ ದಂಪತಿಗಳ ಬದುಕು. ಎಲ್ಲಿಯವರೆಗೆ ಮಾನವನ ಮನಸ್ಸು ಇಂದ್ರಿಯ ಲೋಕದಲ್ಲಿರುವುದೋ ಅಲ್ಲಿಯವರೆಗೂ ಗಂಡು-ಹೆಣ್ಣು ಎಂಬ ತಾರತಮ್ಯವು ಬೇರೂರಿರುತ್ತದೆ. ಯಾವಾಗ ಮನಸ್ಸು ಇಂದ್ರಿಯಾತೀತ ಮಟ್ಟವನ್ನು ತಲುಪುತ್ತದೆಯೋ ಆಗ ಮಾತ್ರವೆ ಮಾನವ ತನ್ನ ಅಂತರ್ಯದಲ್ಲಿ ಹುದುಗಿರುವ ದೈವೀ ಶಕ್ತಿಯನ್ನು ಅರಿಯಲು ಸಾಧ್ಯ ಎನ್ನುವುದು ಈ ದಂಪತಿಗಳ ದೃಢ ನಿಲುವಾಗಿತ್ತು. ಸತಿ-ಪತಿಗಳಿಬ್ಬರೂ ಸಮಾನರು. ಇಬ್ಬರಿಗೂ ಸಮಾನ ಅಧಿಕಾರ ಮತ್ತು ಸ್ವಾತಂತ್ರ್ಯವಿದೆ ಎಂಬುದನ್ನು ಸ್ವತಃ ಆಚರಿಸಿ ತೋರಿಸಿದರು.

ಇವರ ದಾಂಪತ್ಯ ಜೀವನ ಸಂಬಂಧವು ಅವಿನಾಭಾವ ಸಂಬಂಧದಿಂದ ಕೂಡಿದ್ದು ಭೇದ ಕಾಣದ ಸೂರ್ಯನ ಕಿರಣಗಳಂತೆ ಪ್ರಕಾಶಮಾನವಾಗಿ ದಾಂಪತ್ಯಕ್ಕೇ ಹೊಸ ಅರ್ಥವನ್ನು ತೋರಿಸಿದೆ. ಜಗನ್ಮಾತೆ, ಪ್ರಿಯಪತ್ನಿ ಮತ್ತು ಪ್ರಿಯಶಿಷ್ಯೆ—ಈ ಮೂರು ಬಾಂಧವ್ಯಗಳ ಸಮನ್ವಯವನ್ನು ತಮ್ಮ ಪತ್ನಿಯಲ್ಲಿ ಶ್ರೀರಾಮಕೃಷ್ಣರು ಕಂಡರೆ, ಶ್ರೀರಾಮಕೃಷ್ಣರಲ್ಲಿ ಜಗನ್ಮಾತೆ, ಪ್ರಿಯಪತಿ ಮತ್ತು ಆಧ್ಯಾತ್ಮಿಕ ಗುರು—ಈ ಮೂರು ಬಾಂಧವ್ಯಗಳ ಸಮನ್ವಯವನ್ನು ಕಂಡವರು ಶ್ರೀಶಾರದಾದೇವಿ. ದೇಹದ ಮೇಲೆ ಪ್ರಭುತ್ವದ ವಿಜಯ ಪತಾಕೆಯನ್ನು ಈ ಮಹಾಚೇತನಗಳು ಹಾರಿಸಿ, ಪರಿಪೂರ್ಣ ಸ್ಥಿತಿಯತ್ತ, ನಿತ್ಯಾನಂದದ ಸಾಕ್ಷಾತ್ಕಾರದೆಡೆಗೆ ನಡೆಯುವತ್ತ ಉತ್ಸುಕರಾಗಿ, ಪತ್ನಿಗೆ ಪತಿ ಪರದೈವವಾದರೆ ಪತಿಗೆ ಪತ್ನಿಯು ಪರದೇವಿ ಎಂಬುದನ್ನು ಆಚರಿಸಿ ತೋರಿಸಿದ ಭಕ್ತ ಶಿರೋ ಮಣಿಗಳು. ವೈರಾಗ್ಯ ಜೀವನದಲ್ಲೇ ಸಾರ್ಥಕತೆಯನ್ನು ಕಂಡು ಬಾಳಿದವರು. ಏಕಕಾಲದಲ್ಲಿ ಈ ದಂಪತಿಗಳು ಗೃಹಸ್ಥರು ಹಾಗೂ ಸಂನ್ಯಾಸಿಗಳಾಗಿಯೂ ಆದರ್ಶ ದಾಂಪತ್ಯಕ್ಕೆ ಇಂದಿಗೂ ಜೀವಂತ ಉದಾಹರಣೆಯಾಗಿದ್ದಾರೆ. ✡

## ಗಂಗಾಪ್ರಿಯ ಶಿವ

ಒಮ್ಮೆ ಶ್ರೀರಾಮಕೃಷ್ಣರು ದಕ್ಷಿಣೇಶ್ವರದಲ್ಲಿದ್ದಾಗ ರಾಖಾಲ್‌ರೊಡನೆ (ಮುಂದೆ ಸ್ವಾಮಿ ಬ್ರಹ್ಮಾನಂದ) ಗಂಗೆಯ ಆಚೆಯ ದಡದಲ್ಲಿರುವ ಬಾಲಿ ಎಂಬ ಒಂದು ಚಿಕ್ಕ ಪ್ರದೇಶದಲ್ಲಿರುವ ಕಲ್ಯಾಣೇಶ್ವರ ಶಿವನ ದರ್ಶನಕ್ಕಾಗಿ ಹೋದರು. ಶಿವನನ್ನು ಕಂಡ ಕೂಡಲೆ ಗಾಢವಾದ ಸಮಾಧಿಯಲ್ಲಿ ಮುಳುಗಿಬಿಟ್ಟರು. ಬಳಿಯಲ್ಲಿದ್ದ ರಾಖಾಲ್ ಮೇಲೆ ಈ ಘಟನೆ ಅಚ್ಚಳಿಯದ ಪ್ರಭಾವ ಬೀರಿತು. ಬೇಲೂರು ಮಠ ಪ್ರಾರಂಭವಾದ ಅನಂತರ ಮುಂದೆ ಅವರು ಸ್ವಾಮಿ ಬ್ರಹ್ಮಾನಂದರೆಂದು ಖ್ಯಾತರಾಗಿ ರಾಮಕೃಷ್ಣ ಮಹಾಸಂಘದ ಪ್ರಥಮ ಅಧ್ಯಕ್ಷರಾಗಿದ್ದ ಸಮಯದಲ್ಲಿ ಬೇಲೂರು ಮಠಕ್ಕೆ ಹತ್ತಿರದಲ್ಲೇ ಇದ್ದ ಬಾಲಿಯ ಕಲ್ಯಾಣೇಶ್ವರ ಶಿವನ ದರ್ಶನ ಪಡೆದು ಪೂಜೆ ಸಲ್ಲಿಸಲು ಹೋಗಿದ್ದರು. ಸಾಧುಗಳು ಭಕ್ತರು ಅವರೊಂದಿಗೆ ಹೋಗಿ ದರ್ಶನ ಮಾಡಿದರು. ಅಂದಿನಿಂದ ಅವರ ಇಚ್ಛೆಯಂತೆ ಪ್ರತಿ ಸೋಮವಾರ ತಪ್ಪದೆ ಕಲ್ಯಾಣೇಶ್ವರ ಶಿವನಿಗೆ ಬೇಲೂರು ಮಠದಿಂದ ಪೂಜಾಸಾಮಗ್ರಿಗಳನ್ನು ಕಳುಹಿಸುವ ಸತ್ಸಂಪ್ರದಾಯವನ್ನು ಈಗಲೂ ಮುಂದುವರಿಸಿಕೊಂಡು ಹೋಗಲಾಗುತ್ತಿದೆ.

ಒಂದು ವರ್ಷ ಚೈತ್ರ ಮಾಸದಲ್ಲಿ ಮಳೆಯೇ ಇಲ್ಲದೆ ಬಿಸಿಲಿನ ಬೇಗೆ ವಿಪರೀತವಾಗಿ ಸಹಿಸಲು ಅಸಾಧ್ಯವಾಯಿತು. ಸ್ವಾಮಿ ಬ್ರಹ್ಮಾನಂದರು ಬೇಲೂರು ಮಠದಲ್ಲಿ ಸಂನ್ಯಾಸಿಯಾಗಿದ್ದ ಸ್ವಾಮಿ ಬ್ರಜೇಶ್ವರಾನಂದರನ್ನು ಕರೆದು, "ದೇವೇನ್, ಕಲ್ಯಾಣೇಶ್ವರ ಶಿವನಿಗೆ ಹನ್ನೆರಡು ದೊಡ್ಡ ಕೊಡಗಳಲ್ಲಿ ಗಂಗೆಯ ನೀರನ್ನು ತಂದು ಅಭಿಷೇಕ ಮಾಡಿಸಿದರೆ ಮಳೆ ಬರುತ್ತದೆ" ಎಂದರು. ಕೂಡಲೇ ಆ ಸಂನ್ಯಾಸಿಗಳು ಹೊರಟು ಶಿವನಿಗೆ ಹನ್ನೆರಡು ಕೊಡಗಳಿಂದ ಗಂಗಾಭಿಷೇಕ ಮಾಡಿದರು. ಹನ್ನೆರಡನೆಯ ಕೊಡವನ್ನು ಅರ್ಪಿಸುತ್ತಿದ್ದಂತೆ ಆಕಾಶದಲ್ಲಿ ಕಾರ್ಮುಗಿಲು ಕವಿದು ಧಾರಾಕಾರವಾಗಿ ಮಳೆ ಸುರಿಯಿತು. ಆ ಸಂನ್ಯಾಸಿಗಳು ಶಿವನಿಗೆ ಅಭಿಷೇಕ ಮುಗಿಸಿ, ಮಳೆಯಲ್ಲಿ ನೆನೆದು ಬೇಲೂರು ಮಠಕ್ಕೆ ಹಿಂದಿರುಗಿದಾಗ ಅಲ್ಲಿ ಮೊಣಕಾಲುದ್ದ ನೀರು ತುಂಬಿರುವುದನ್ನು ಕಂಡರು.

(ಆಧಾರ: *Global Vedanta, Vol. IX*)